ಕಥೆ

# ಕ್ರೋಧ

■ ಡಾ. ಪ್ರೇಮಲತ ಬಿ.



ನೊರೆಹಾಲಿನ ಬಣ್ಣದ ಬೆಳಗು ಬುರುಬುರನೆಂದು ಕಾದು ಕಾವೇರಿದ ರೀತಿ ಉಕ್ಕುತ್ತಿದ್ದ ದಿನವದು. ಎಂದೋ ಬೇರ್ಪಟ್ಟ ಹಾಲ್ಮನಸ್ಸಿನ ಎರಡು ಜೀವಗಳು ಆ ದಿನದಂದು ಭೇಟಿಯಾಗಲು ಕಾದಿದ್ದವು. ಆದರೆ ಕೆನೆಗಟ್ಟಿ ಕೊತ ಕೊತನೆಂದು ಕುದಿವ ಮನಸ್ಸು ಒಂದಾದರೆ, ಕಳೆದುಹೋದ ಆತ್ಮೀಯ ಬಾಂಧವ್ಯ ತಾನಿದ್ದ ಊರಲ್ಲೇ ಅನಿರೀಕ್ಷಿತವಾಗಿ ಕಾಲಿಗಡರಿದ ಸಂತಸದಲ್ಲಿ ಉಕ್ಕುತ್ತಿದ್ದ ಮನಸ್ಸು ಇನ್ನೊಂದಾಗಿತ್ತು.

"ನಬಿಲ್…"

"ಜಾಧವ್!"

ನಬಿಲ್‌ನನ್ನು ಬಾಚಿ ತಬ್ಬಿಕೊಂಡು ಹರ್ಷ ಪಡಬೇಕೆಂದು ಬಂದಿದ್ದವನು ಜಾಧವ್. ಆದರೆ ಸ್ನೇಹಿತನನ್ನು ನೋಡಿ ಮೈಮೇಲೆ ತಣ್ಣೀರು ಎರಚಿದಂತೆ ಕುಗ್ಗಿಹೋದ. ಯಾವುದೋ ಹಿಂಜರಿಕೆಯಲ್ಲಿ ಕೈಯನ್ನೂ ಕುಲುಕದೇ ನಬಿಲ್ ಎದುರು ಸದ್ದಿಲ್ಲದೆ ಕುಳಿತ. ಕಣ್ಣುಗಳು ಅವನ ಮನಸ್ಸಿಗಾಗಿದ್ದ ಆಘಾತವನ್ನು ಮುಚ್ಚಿಡುವಲ್ಲಿ ಸೋತಿದ್ದವು. ರೆಪ್ಪೆಗಳು ಪರಸ್ಪರ ಕೂಡುವುದನ್ನೇ ಮರೆತು, ನಬಿಲ್‌ನ ದೇಹದ ತುಂಬ ಓಡಾಡುವುದರಲ್ಲೇ ಕಣ್ಣನ್ನು ತೊಡಗಿಸಿ, ಅವನ ಮುಖದಲ್ಲಿ ದೃಷ್ಟಿನೆಟ್ಟು ಮರಗಟ್ಟಿಹೋದವು.

ನಬಿಲ್‌ಗೆ ಆ ಬಗ್ಗೆ ಧ್ಯಾಸವೇ ಇದ್ದಂತಿರಲಿಲ್ಲ. ಅವನಿಗೆ ನೇರವಾಗಿ ವ್ಯವಹಾರಕ್ಕೆ ಇಳಿವ ಇರಾದೆಯಿದ್ದಂತಿತ್ತು. ಲಂಡನ್ನಿನ ಗಲ್ಲಿಯೊಂದರಲ್ಲಿ, ಸಣ್ಣದೊಂದು ಓಣಿಯಂತಹ ರಸ್ತೆಯ ಬದಿಗೆ ಟೇಬಲ್ಲು–ಕುರ್ಚಿಗಳನ್ನು ಹಾಕಿದ್ದ ಫ್ರೆಂಚ್ ರೆಸ್ಟೋರೆಂಟದು. ಮಟ ಮಟ ಮಧ್ಯಾಹ್ನವಾದ್ದರಿಂದ ಹೆಚ್ಚೇನೂ ಜನರಿರಲಿಲ್ಲ.

ಜಾಧವನೇ ತನಗೊಂದು ಪೈಂಟ್ ಬೀರ್ ಮತ್ತು ನಬಿಲ್‌ಗೆ ಕಾಫಿಗೆ ಆರ್ಡರ್ ನೀಡಿದ. ನಂತರ, ತಡೆಯಲಾಗದೆ "ಹೇಗಿದ್ದೀಯ ನಬಿಲ್?'' ಎಂದು ಮೆತ್ತಗೆ ಮಾತು ಶುರುಮಾಡಿದ. ಆ ಧ್ವನಿಯಲ್ಲಿ 'ನಬಿಲ್ ಇವನೇನಾ?' ಎಂಬ ಅಚ್ಚರಿಯೂ ಇತ್ತು. ಅಗಲಕ್ಕೆ ತೆರೆದಿದ್ದ ಜಾಧವನ ಕಣ್ಣುಗಳು ಎದುರಿದ್ದ ವ್ಯಕ್ತಿಯನ್ನು ತಡವುತ್ತ ತನಗೆ ನೆನಪಿದ್ದ ಗೆಳೆಯನ ಚಹರೆಗಳನ್ನು ಹುಡುಕಲು ಪ್ರಯಾಸಪಡುತ್ತಿದ್ದವು.

"ನೀನು ಬರ್ತೀಯ ಅಂತ ಗೊತ್ತಿತ್ತು.'' ನಬಿಲ್ ಧ್ವನಿಯಲ್ಲಿ ಮರ್ಮಕ್ಕೆ ತಾಕುವಷ್ಟು ಅಸಹ್ಯವಿತ್ತು.

"ಎಷ್ಟು ವರ್ಷವಾಯ್ತು ನಿನ್ನ ನೋಡಿ. ಬರದೇ ಇರಕ್ಕೆ ಸಾಧ್ಯವಿತ್ತಾ?'' – ಜಾಧವ್ ಕಳಕಳಿಯಿಂದ ಕೇಳಿದ. ನಬಿಲ್ ಕೆಕ್ಕರಿಸಿ ನೋಡಿದ ರೀತಿಗೆ, ಜಾಧವ್‌ನ ಗಂಟಲು ಒಣಗಿತು. ಅವನಿಂದ ಆ ಕ್ಷಣಕ್ಕೆ ಇನ್ಯಾವ ಮಾತುಗಳೂ ಹೊರಡಲಿಲ್ಲ. ಗುರುತು ಹಿಡಿಯಲಾಗದಷ್ಟು ಸೊರಗಿಹೋಗಿದ್ದ ಗೆಳೆಯನನ್ನು ನೋಡಿ ಅವನ ಮನಸ್ಸು ಗಾಬರಿಯಾಗಿಹೋಗಿತ್ತು. ಗಾಯದ ಕಲೆಗಳಿಂದಲೇ ಮುಚ್ಚಿದಂತಿದ್ದ ಅವನ ಮೈಯ ಚರ್ಮ ಶರಟು–ಪ್ಯಾಂಟುಗಳಡಿಯಿಂದ ಇಣುಕುತ್ತಿತ್ತು. ಬಟ್ಟೆಗಳು ಕೊಳಕಾಗಿದ್ದವು. ಉಗುರುಗಳನ್ನು ರಕ್ತಬರುವಷ್ಟು ತುಂಡಕ್ಕೆ ಅವನು ಕಡಿಯುತ್ತಿರುವುದಕ್ಕೆ ಪುರಾವೆ ಕಾಣಿಸುತ್ತಿತ್ತು. ಚರ್ಮ ಒಡೆದಿತ್ತು. ಕತ್ತರಿಸುವವರ ಕತ್ತರಿಯಿಂದ ಬಚಾವಾಗಿ ಉಳಿದ ಕೂದಲುಗಳು ಅವನ ನಿರ್ಲಕ್ಷ್ಯದಿಂದ ನಿಯಂತ್ರಣ ತಪ್ಪಿದಂತೆ ಬೇಕಾದೆಡೆ ಬೆಳೆದು ಪೊದೆಯಾಗಿದ್ದವು.

"ನಬಿಲ್…'' ಜಾಧವ್ ಮತ್ತೆ ಮಾತು ಶುರುಮಾಡಿ ವಾಕ್ಯ ಮುಗಿಸುವ ಮುನ್ನವೇ ನಬಿಲ್ ಮಾತಾಡಿದ.

"ನಿನ್ನನ್ನು ಭೇಟಿಯಾಗಬಾರದು ಅಂದುಕೊಂಡಿದ್ದೆ. ಆದರೆ, ನಿನಗಿಂತ ಹೆಚ್ಚು ಅಸಹ್ಯಗಳನ್ನೆಲ್ಲ ನೋಡಿದ ಮೇಲೆ ನೀನು ಅಷ್ಟೇನು ಅಸಹ್ಯ ಅನ್ನಿಸ್ತಿಲ್ಲ"

"ನಬಿಲ್… ನೀನು ತಪ್ಪು ತಿಳಿದಿದ್ದೀಯ. ನಾನು ನಿನ್ನನ್ನು ಸಂಪರ್ಕಿಸಲು ಹಲವು ಬಾರಿ ಪ್ರಯತ್ನಿಸಿದ್ದೀನಿ. ಸಾಧ್ಯವಾಗಲಿಲ್ಲ". ಜಾಧವನ ಧ್ವನಿಯಲ್ಲಿ ಅಪರಾಧಿ ಭಾವಕ್ಕಿಂತ ಅಸಹಾಯಕತೆಯೇ ಹೆಚ್ಚು ಧ್ವನಿಸಿತು.

"ಯಾಕೆ ಪ್ರಯತ್ನ ಪಟ್ಟೆ?'' – ಕಡಿಯುತ್ತಿದ್ದ ಟೂತ್ ಪಿಕ್ ಅನ್ನು ಥುಪ್ ಎಂದು ತುಪ್ಪಿದ ನಬಿಲ್‌ನ ಧ್ವನಿಯಲ್ಲಿ ಉತ್ತರವೂ ಗೊತ್ತಿದೆಯೆಂಬ ಭಾವವಿತ್ತು. ಜಾಧವ್‌ನ ಕಣ್ಣಿಗೆ ಕಣ್ಣು ಜೋಡಿಸಿದ ನಬಿಲ್ ಉತ್ತರಕ್ಕಾಗಿ ಕಾದ.

"ನೀನು ಸುರಕ್ಷಿತವಾಗಿದ್ದೀಯ ಅಂತ ಇತ್ತೀಚೆಗಷ್ಟೆ ಗೊತ್ತಾಗಿದ್ದು" – ಜಾಧವ್ ತಡವರಿಸಿದ.

"ಹೇಗನ್ನಿಸ್ತು, ನಾನಿನ್ನೂ ಬದುಕಿದ್ದೀನಿ ಅಂತ ಗೊತ್ತಾದಾಗ?'' – ತಾನು ಬದುಕಿರೋದೆ ಜಾಧವನ ಮೇಲೆ ತೀರಿಸಿಕೊಂಡ ಸೇಡು ಎನ್ನುವ ಲೆಕ್ಕಕ್ಕೆ ನಬಿಲ್‌ನ ಮಾತಿತ್ತು. ಅವನ ಕಣ್ಣಗುಡ್ಡೆಗಳು ಮಿಕವೊಂದನ್ನು ಸುತ್ತುವರೆದ ಬೇಟೆಗಾರನಂತೆ ಹೊರಳಿದವು.

"ನೀನು ನನ್ನನ್ನು ನಂಬ್ತಿಲ್ಲ. ಬದಲು ತಪ್ಪು ನನ್ನದೇ ಅಂತ ತೀರ್ಮಾನಿಸಿದಂತಿದೆ". ಜಾಧವ್ ಸೋತವನಂತೆ ನಿಟ್ಟುಸಿರಿಟ್ಟು ತಲೆ ತಗ್ಗಿಸಿದ.

"ತಪ್ಪಂತೂ ಆಗಿದೆ ಅಂತ ಒಪ್ಕೊಂಡ್ಯಲ್ಲ ಜಾಧವ್? ಅಷ್ಟು ಸಾಕು'' ಎಂದ ನಬಿಲ್.

ನಬಿಲ್ ತನ್ನ ವಯಸ್ಸಿಗಿಂತ ಹತ್ತು ವರ್ಷ ಹೆಚ್ಚಾದವನಂತೆ ಕಾಣುತ್ತಿದ್ದ. ಅವನ ಕಣ್ಣುಗಳಲ್ಲಿ ನಾಲ್ಕು ವರ್ಷಗಳ ಹಿಂದೆ ಕಾಣಿಸುತ್ತಿದ್ದ ಬೆಳಕು ಆರಿಹೋಗಿತ್ತು. ಬದಲು ಶೀತಲ ಬರ್ಫವೊಂದು ಉರಿಯುತ್ತಿತ್ತು. ವರ್ಷಾನುಗಟ್ಟಲೆ ಘನೀಕರಿಸಿದ ತಣ್ಣಗಿನ ಕ್ರೋಧ! ಅದು ತನ್ನ ಮೇಲೆ ಕೇಂದ್ರೀಕರಿಸಿದೆಯೇ? ಜಾಧವ್ ಗಲಿಬಿಲಿಗೊಂಡ.

"ತಪ್ಪು ಇಬ್ಬರಿಂದಲೂ ಆಗಿದೆ ನಬಿಲ್" ಜಾಧವ್ ಸಂಧಾನದ ದನಿಯಲ್ಲಿ ನುಡಿದ.

"ಬಾಯ್ಮುಚ್ಚು. ತಪ್ಪು ಆದದ್ದೆಲ್ಲ ನನ್ನಿಂದಲೇ ಅಂತ ನನಗೆ ಚೆನ್ನಾಗಿ ಗೊತ್ತು''. ನಬಿಲ್ ಹಲ್ಲು ಕಡಿದದ್ದು ಜಾಧವ್‌ಗೆ ಕಂಡಿತು. ನಬಿಲ್‌ನ ಮುಂದಿನ ಹಲ್ಲುಗಳು ಮುರಿದಿದ್ದವು. ಪಕ್ಕದ ಹಲವು ಹಲ್ಲುಗಳು ಕಾಣೆಯಾಗಿದ್ದವು. ಮುಖದ ತೊಗಲಿನ ಹಿಂದಿದ್ದ ಅವನ ತಲೆಬುರುಡೆಯ ಮೂಳೆಗಳು ಚರ್ಮವನ್ನು ಸೀಳಿಬರುವಂತೆ ಉಬ್ಬಿ ನಿಂತಿದ್ದವು.